# ಜನ ಏನಂತಾರೆ?



‘ಇಟ್ಟ ಹೆಜ್ಜೆ ದಿಟ್ಟ ನಡೆ’ ರಾಜ್ಯ ಸರ್ಕಾರದ ಕ್ರಮಕ್ಕೆ ರಾಜ್ಯದ ಎಲ್ಲ ಜಿಲ್ಲೆಗಳಿಂದ ಫಲಾನುಭವಿಗಳು ಮುಕ್ತ ಕಂಠದ ಶ್ಲಾಘನೆ ನಡೆಸಿದ್ದಾರೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮೂರು ವರ್ಷಗಳ ಸಾಧನೆಯ ಬಗ್ಗೆ ರಾಜ್ಯದೆಲ್ಲೆಡೆ ಜನ ಏನಂತಾರೆ.. ಎನ್ನುವುದಕ್ಕೆ ಇಲ್ಲಿದೆ ಸ್ಪಷ್ಟಸಾಕ್ಷಿ.

● ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ಗ್ರಾಮದಿಂದ ಬಂದಿದ್ದ ಬಸವರಾಜ ಮಲ್ಲನಾಯಕ ಅವರು ಅನ್ನಭಾಗ್ಯ ಯೋಜನೆಯ ಫಲಾನುಭವಿಗಳು. ‘ಈ ಹಿಂದೆ ದುಖಾನುಗಳಲ್ಲಿ ದವಸ ಧಾನ್ಯಕೊಳ್ಳಲು ದುಡ್ಡಿನ ಕೊರತೆಯಿಂದ ಸಂಕಷ್ಟದಲ್ಲಿದ್ದೆವು. ಇಂದು ಈ ಸರ್ಕಾರ ಬಂದು ನಮಗೆ ನಿಜಕ್ಕೂ ಅನ್ನಭಾಗ್ಯ ನೀಡಿದೆ. ಎರಡು ಹೊತ್ತು ಹಸಿದ ಹೊಟ್ಟೆ ತುಂಬಿಸಿಕೊಳ್ಳುವ ಅವಕಾಶ ಮಾಡಿಕೊಟ್ಟಿದೆ’ ಎನ್ನುತ್ತಾರೆ.

● ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ಮುಗಳಿ ಗ್ರಾಮದ ಶ್ರೀಮತಿ ಸುಮಂಗಲ ಎಸ್. ಬೆಟಗೇರಿ ಅವರು ಕೃಷಿ ಕಾರ್ಯ ಮಾಡುವ ಮಹಿಳೆ. ತಮ್ಮ ಆದಾಯದಲ್ಲಿ ಮಾರುಕಟ್ಟೆಗೆ ಹೋಗಿ ಧಾನ್ಯ ಕೊಳ್ಳುವಷ್ಟು ಆದಾಯ ಇರಲಿಲ್ಲ. ಅದೇ ರೀತಿ ನೇತ್ರಾವತಿ ಚಂದ್ರಶೇಖರ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಗೊಂಬಿ ಗ್ರಾಮದ ಕೃಷಿಕ ಮಹಿಳೆ. ಈಕೆಯದು ಆರ್ಥಿಕ ಸಮಸ್ಯೆ. ಇವರಿಗೆ ಅನ್ನಭಾಗ್ಯ ಯೋಜನೆ ವರವಾಗಿ ಪರಿಣಮಿಸಿದೆ. ಆ ಮಹಿಳೆಯರ ಮಾತುಗಳಲ್ಲೇ ಹೇಳುವುದಾದರೆ ‘ರಾಜ್ಯ ಸರ್ಕಾರ ಉಚಿತ ಅಕ್ಕಿ, ಗೋಧಿಯ ಜೊತೆ, ಉಪ್ಪು, ಅಡುಗೆ ಎಣ್ಣೆ ನೀಡುತ್ತಿದೆ. ಮಾರುಕಟ್ಟೆಯಲ್ಲಿ ಹನ್ನೊಂದು ರೂಪಾಯಿಗಳಿಗೆ ದೊರಕುವ ಉಪ್ಪು ನಮಗೆ ಎರಡು ರೂ.ಗೆ, ಐವತ್ತು ರೂಪಾಯಿಯ ತಾಳೆಎಣ್ಣೆ ೨೫/ ರೂಪಾಯಿಗಳಿಗೆ ಹಾಗೂ ಮಾರುಕಟ್ಟೆಯಲ್ಲಿ ೪೦ ರೂ.ಗಳಿಗೆ ಇರುವ ಸಕ್ಕರೆಯನ್ನು ರಾಜ್ಯ ಸರ್ಕಾರ ೧೩.೫೦ ರೂ.ಗಳಿಗೆ ನೀಡುತ್ತಿದೆ. ಇದು ನಮ್ಮ ದುಸ್ತರ ಬದುಕನ್ನು ಹಸನುಗೊಳಿಸಿದೆ’ಎನ್ನುತ್ತಾರೆ.

● ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಕಡಕೇರಿ ಗ್ರಾಮದ ದೇವರಾಜ ನಾರಾಯಣ ನಾಯಕ ಅವರು ಸಹ ಅನ್ನಭಾಗ್ಯದ ಫಲಾನುಭವಿಗಳು. ಸಂಕಷ್ಟದಲ್ಲಿದ್ದ ಬಡವರ ಬದುಕು ಸರ್ಕಾರದ ಅನ್ನಭಾಗ್ಯ ಯೋಜನೆಯನ್ನು ಇಂದು ಸಹನೀಯವಾಗಿಸಿದೆ ಎನ್ನುತ್ತಾರೆ. ಕೊಪ್ಪಳ ಜಿಲ್ಲೆಯ ವಿಶಾಲಾಕ್ಷಮ್ಮ ಮತ್ತು ಯಂಕಮ್ಮ ಸಹಾ ಅನ್ನಭಾಗ್ಯ ಯೋಜನೆಯ ಫಲಾನುಭವಿಗಳಾಗಿದ್ದು ಯೋಜನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

● ಹಾವೇರಿ ಜಿಲ್ಲೆಯ ಕುರಬಗೊಂಡ ಶಾಲೆಯ ಕುಮಾರಿ ಕೀರ್ತಿ ಆನಂದ್ ದೊಡ್ಡಗೌಡರ್ ೭ನೆಯ ತರಗತಿಯ ವಿದ್ಯಾರ್ಥಿನಿ, ಅದೇ ಹಾವೇರಿ ಜಿಲ್ಲೆಯ ವರದಹಳ್ಳಿ ಗ್ರಾಮದ ೮ನೇ ತರಗತಿಯ ೧೪ ವರ್ಷದ ಕುಮಾರಿ ರಕ್ಷಿತ ಮಲ್ಲೇಶಪ್ಪ ಹಡಪದ್ ಕ್ಷೀರಭಾಗ್ಯ ಯೋಜನೆಯ ಫಲಾನುಭವಿಗಳು.

ಬೆಳಗಾಗೆದ್ದು ಮನೆಯ ಕೆಲಸ ಮುಗಿಸಿ ಒಂದು ತುತ್ತು ಉಂಡು ಶಾಲೆಗೆ ಬಂದರೆ ಮತ್ತೆ ಊಟ ಕಾಣುತ್ತಿದ್ದುದು ರಾತ್ರಿಯೇ. ‘ಶಾಲೆಯಲ್ಲಿ ಅಪೌಷ್ಠಿಕತೆಯಿಂದಾಗಿ, ಹಸಿವಿನಿಂದಾಗಿ, ರಕ್ತ ಹೀನತೆಯಿಂದಾಗಿ ಬಳಲಿ ಹೋಗುತ್ತಿದ್ದೆವು. ಹಾಲು ಕೊಳ್ಳುವಷ್ಟು ಮನೆಯಲ್ಲಿ ಶಕ್ತರಾಗಿರಲಿಲ್ಲ. ಈಗ ವಾರದಲ್ಲಿ ಮೂರುದಿನ ಮಧ್ಯಾಹ್ನ ಶಾಲೆಯಲ್ಲಿಯೇ ಬಿಸಿ ಹಾಲು ಕೊಡುತ್ತಿದ್ದು ಮಧ್ಯಾಹ್ನದ ನಂತರ ಶಾಲೆಯಲ್ಲಿ ಉತ್ಸಾಹದಿಂದ ಪಾಠ ಕಲಿಯಲು ಅನುಕೂಲವಾಗುತ್ತಿದೆ’ ಎಂದು ಹೇಳುತ್ತಾರೆ.

● ಬಳ್ಳಾರಿ ಜಿಲ್ಲೆ ಸಂಜೀವರಾಯನ ಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹುಲುಗಪ್ಪ ಮತ್ತು ಎರಿಸ್ವಾಮಿ ವಿದ್ಯಾರ್ಥಿಗಳು. ಕ್ಷೀರಭಾಗ್ಯ ಯೋಜನೆಯ ಕಂದಮ್ಮಗಳು. ಅವರ ಮುಖದಲ್ಲಿ ಬಡತನ ಎದ್ದುಕಾಣುತ್ತಿತ್ತು. "ಸಾ ನಮಗೆ ಸ್ಕೂಲಲ್ಲಿ ಸೋಮವಾರ, ಬುಧವಾರ, ಶುಕ್ರವಾರ ಹಾಲು ಕೊಡ್ತಾರೆ ಸಾ ನಿಜವಾಗಲೂ ನಮಗೆ ಇಷ್ಟ ಆಗೈತ್ ಸಾ" ಎಂದು ತಮ್ಮ ಅನಿಸಿಕೆಯನ್ನು ಹಂಚಿಕೊಳ್ಳುತ್ತಾರೆ.

## ಸರ್ಕಾರ ನಮ್ಮನ್ನು ಗುರುತಿಸಿದೆ..

‘ನೋಡಿ ಈ ಜನಮನ ಪ್ರೋಗ್ರಾಮ್‌ನಲ್ಲೇನೆ, ‘ಅವರು ಮೈತ್ರಿ ಸ್ಕೀಮ್ನೋರು ಕಣೋ’ ಅಂತ ಯಾರೋ ನಕ್ಕು ಬಿಟ್ಟರು. ನನಗೆ ಬಹಳ ಬೇಸರವಾಯಿತು!

–ಚಿಂತಾಮಣಿಯ ಅನಿಲ್ ಮುಖ ಚಿಕ್ಕದು ಮಾಡಿಕೊಂಡು ಹೀಗೆ ಹೇಳಿದಾಗ ಈ ಸಮುದಾಯದವರು ಅನುಕ್ಷಣವೂ ಅನುಭವಿಸುವ ಯಾತನೆಯ ಸಣ್ಣ ಪರಿಚಯವಾಯಿತು.

ಲಿಂಗತ್ವ ಅಲ್ಪಸಂಖ್ಯಾತರನ್ನು ಸಮಾಜ ನಡೆಸಿಕೊಳ್ಳುವ ರೀತಿಯ ಬಗ್ಗೆ ಅನಿಲ್‌ಗೆ ಬಹಳ ಸಿಟ್ಟು. ‘ತಾರತಮ್ಯದ ಪರಾಕಾಷ್ಠೆಯನ್ನು ಜೀವನದಲ್ಲಿ ಅನುಭವಿಸಿ ಸೋತು ಹೋಗಿದ್ದೇವೆ. ಆದರೆ ಸರ್ಕಾರ ನಮ್ಮಂತವರನ್ನು ಗುರುತಿಸಿ ನಮಗೂ ಮಾಸಾಶನ ಕೊಡುತ್ತಿರುವುದು ನಮ್ಮನ್ನೂ ಯಾರೋ ಗುರುತಿಸಿದ್ದಾರೆ, ನಾವೂ ಲೆಕ್ಕಕ್ಕಿದ್ದೇವೆ ಅನ್ನೂ ಭಾವನೆ ಮೂಡಿಸುತ್ತದೆ. ಸರ್ಕಾರ ನಮಗೆ ವಸತಿ ಸೌಲಭ್ಯವನ್ನೂ ನೀಡಲಿ’ ಎನ್ನುತ್ತಾರೆ ಅವರು. ಚಿಂತಾಮಣಿ ತಾಲ್ಲೂಕಿನಲ್ಲಿಯೇ